

# ಪುಟ್ಟಿಯ ಕನಸು

■ ಡಾ. ವಿನಯ ಶ್ರೀನಿವಾಸ್

ಕಲೆ: ಸಂತೋಷ್ ಸಸಿಹಿತ್ಲು

ಅಮ್ಮಾ.. ಭಿಕ್ಷೆ ನೀಡಿ ತಾಯಿ...

ಯಾರಪ್ಪ ಅದು? ಬೆಳಿಗ್ಗೆ ಬೆಳಿಗ್ಗೇನೆ ಭಿಕ್ಷೆಗೆ ಬಂದಿದ್ದೀಯಾ?

ಅಮ್ಮಾ, ಉಸಿರಾಡಲಿಕ್ಕೆ ಕಷ್ಟ ಆಗ್ತಾ ಇದೆ ತಾಯಿ... ನನ್ನ ಹತ್ತಿರ ಇದ್ದ ಸ್ವಲ್ಪ ಆಮ್ಲಜನಕವೂ ಖಾಲಿ ಆಗ್ತಾ ಇದೆ. ಖಾಲಿಯಾಗಿ ಇನ್ನೇನು ನನ್ನ ಪ್ರಾಣ ಪಕ್ಷಿ ಹಾರಿ ಹೋಗೋದಕ್ಕೆ ಮುಂಚೆ ಸ್ವಲ್ಪ ಆಮ್ಲಜನಕವನ್ನು ನನ್ನ ಬೆನ್ನಿನ ಹಿಂದೆ ಇರುವ ಸಿಲಿಂಡರ್‌ಗೆ ತುಂಬಿಸಿ ಅಮ್ಮಾ.

ಹೋಗಪ್ಪಾ, ಮುಂದೆ ಹೋಗು. ನಮ್ಮ ಮನೆಯಲ್ಲಿಯೂ ಮನೆ ಮಂದಿಗೆ ಆಗುವಷ್ಟು ಆಮ್ಲಜನಕ ಮಾತ್ರ ಇದೆ. ಅದನ್ನೂ ನಾವು ಬ್ಲಾಕ್ ಮಾರುಕಟ್ಟೆಯಲ್ಲಿ ದುಪ್ಪಟ್ಟು ದುಡ್ಡು ಕೊಟ್ಟು ಖರೀದಿಸಿದ್ದೇವೆ. ಅದನ್ನೇ ನಿನಗೆ ಕೊಟ್ಟು ನಾವು ನಮ್ಮ ಮಕ್ಕಳು ಮುಂದೆ ಏನು ಮಾಡೋದಪ್ಪಾ?

ತನ್ನ ತಾಯಿ ಮತ್ತು ಭಿಕ್ಷುಕನ ನಡುವಿನ ಸಂಭಾಷಣೆಯನ್ನು ಕೇಳಿ ಅಡುಗೆ ಮನೆಯಲ್ಲಿದ್ದ ಪುಟ್ಟಿ ಜಗುಲಿಗೆ ಬಂದಳು.

ಆ ಭಿಕ್ಷುಕ ಆಮ್ಲಜನಕಕ್ಕಾಗಿ ಬೇಡುತ್ತಿರುವುದು ಪುಟ್ಟಿಗೆ ತಿಳಿಯಿತು. ಅವನನ್ನು ನೋಡಿ ಅವಳಿಗೆ ಅಯ್ಯೋ ಎನ್ನಿಸಿತು. ಕೂಡಲೇ ಅಮ್ಮನ ಕಡೆ ಓಡಿ ಬಂದು ಅಮ್ಮ ಪ್ಲೀಸ್ ಸ್ವಲ್ಪ ಆಮ್ಲಜನಕ ಕೊಡೋಣಮ್ಮ ಅವನಿಗೆ, ಪಾಪ, ಇನ್ನೊಂದು ಸ್ವಲ್ಪ ಹೊತ್ತಿಗೆ ಅವನ ಪ್ರಾಣನೇ ಹೋಗೋ ಹಾಗೆ ಕಾಣಿಸ್ತಿದೆ. ಅಮ್ಮಾ, ಪಾಪ ಸಾಯುವ ಮುನ್ನ ಬೇಡುತ್ತಿದ್ದಾನೆ. ಒಂದಿಷ್ಟು ಕೊಡಮ್ಮ. ನಮ್ಮ ಮನೆಯಲ್ಲಿ ಸಾಕಷ್ಟು ಇದೆ.

ಪುಟ್ಟಿ, ನಿನಗೆ ಗೊತ್ತಾಗಲ್ಲ, ಸುಮ್ಮನಿರು. ನಮ್ಮ ಬಳಿಯೂ ಕೆಲವೇ ಕೆಲವು ದಿನಗಳಿಗಾಗುವಷ್ಟು ಆಮ್ಲಜನಕದ ಸಂಗ್ರಹ ಇದೆ. ಅಪ್ಪ ಯಾವುದಕ್ಕೂ ಇರಲಿ ಎಂದು ಆಮ್ಲಜನಕದ ಸಿಲಿಂಡರ್‌ಗಳಿಗೆ ನಿನ್ನ ರಾತ್ರಿ ಅಷ್ಟೇ ಬುಕ್ ಮಾಡಿದ್ದಾರೆ. ಅದು ಯಾವಾಗ ನಮಗೆ ಬಂದು ಸೇರುತ್ತದೆಯೋ ಹೇಳಲಿಕ್ಕೆ ಬರುವುದಿಲ್ಲ. ಇರುವ ಸಂಗ್ರಹವನ್ನು ಖಾಲಿ ಮಾಡಿದರೆ ಮುಂದೆ ನಮ್ಮ ಗತಿ ಏನು? ನಾವು ಯಾರ ಹತ್ತರ ಹೋಗಿ ಕೇಳಲೂ ಆಗುವುದಿಲ್ಲ. ಪ್ರಾಣವಾಯುವನ್ನು ಯಾರು ತಾನೆ ಕೊಡಲು ಮುಂದೆ ಬರ್ತಾರೆ. ನಿನಗೆ ಅದರ ಕಷ್ಟ ಗೊತ್ತಾಗಲ್ಲ ಬಾಯಿ ಮುಚ್ಚಿಕೊಂಡು ಕುಳಿತುಕೊ ಎನ್ನುತ್ತಾರೆ.

'ಅಮ್ಮ ಪ್ಲೀಸ್ ಸ್ವಲ್ಪವಾದ್ರೂ ಕೊಡಿ. ಅಮ್ಮ.. ಪ್ಲೀಸ್ ಪ್ಲೀಸ್...' ಪುಟ್ಟಿ ಕನವರಿಸಿದ್ದಳು. ನಿದ್ದೆಯಲ್ಲಿದ್ದ ಪುಟ್ಟಿ ಏನೋ ಬಡಬಡಿಸುತ್ತಿದ್ದುದನ್ನು ಕೇಳಿಸಿಕೊಂಡ ಆಕೆಯ ತಾಯಿ ಅವಳ ರೂಮಿಗೆ ಅವಸರದಲ್ಲೇ ಬಂದರು. 'ಪುಟ್ಟಿ, ಪುಟ್ಟಿ, ಏಳು. ಗಂಟೆ ಏಳಾಯ್ತು. ಓದುವ ಮಕ್ಕಳು ಇಷ್ಟು ಹೊತ್ತು ಮಲಗಿದರೆ ಹೇಗೆ? ಶಾಲೆಗೆ ತಡ ಆಗುತ್ತಿದೆ. ನನಗೆ ಇವತ್ತು ಬ್ಯಾಂಕಿನಲ್ಲಿ ಸ್ವಲ್ಪ ಕೆಲಸ ಇದೆ. ಹೋಗುವಾಗ ಹಾಗೆ ನಿನ್ನನ್ನು ಶಾಲೆಗೆ ನಾನೇ ಬಿಟ್ಟು ಹೋಗಬೇಕು ಅಂದುಕೊಂಡಿದ್ದೇನೆ, ಏಳು ಅಂದರು.

ಅಮ್ಮ ನೀನು ಬರ್ತಿಯಲ್ಲ ಎಂದು ಖುಷಿಯಿಂದ ಎದ್ದು ಕುಣಿಯಲು ಶುರುಮಾಡಿದಳು.

ಪುಟ್ಟಿ, ಅದೇನೇ ಏನನ್ನೊ ಕೊಡಿ, ಪ್ಲೀಸ್ ಅಂತ ಕೇಳ್ತಾ ಇದ್ದೆ? ಏನಮ್ಮಾ ಬೇಕು ನಿನಗೆ?

ಅಮ್ಮನ ಧ್ವನಿಗೆ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದ ಪುಟ್ಟಿಗೆ ತಾನು ಕಂಡದ್ದು ಕನಸು ಎಂದು ಮನವರಿಕೆಯಾಯಿತು. ಹಿಂದಿನ ದಿನ ಅವರ ಟೀಚರ್ ಪಾಠ ಮಾಡುವಾಗ ಜಾಗತಿಕ ತಾಪಮಾನದ ಏರಿಕೆ, ಮಾಲಿನ್ಯದಿಂದ ಉಂಟಾಗುತ್ತಿರುವ ವೈಪರೀತ್ಯ. ಅದಕ್ಕೆ ನಾಗರಿಕರು ಎಂದುಕೊಳ್ಳುವ ಮನುಷ್ಯರ ಅರಣ್ಯ ನಾಶ ಕೂಡ ಕಾರಣ ಎಂದಿದ್ದು ನೆನಪಾಯಿತು. ಅವರು ಗಿಡ ಮರಗಳ ನಾಶದಿಂದ ಮುಂದೆ ಪ್ರತಿಯೊಬ್ಬರೂ ಆಮ್ಲಜನಕದ ಸಿಲಿಂಡರ್‌ಗಳನ್ನು ಬೆನ್ನಿನ ಮೇಲೆ ಹೊತ್ತು ತಿರುಗುವಂತಹ ಪರಿಸ್ಥಿತಿ ಬರಬಹುದು ಎಂದು ಆತಂಕವನ್ನು ತೋರಿಸಿದ್ದರು. ಅದನ್ನೇ ಯೋಚಿಸುತ್ತಿದ್ದೆ. ಅಮ್ಮ ಅಂತಹ ದಿನಗಳು ಏನಾದರೂ ಬಂದರೆ ಹೇಗಮ್ಮ? ಈಗಲೇ ಅಡುಗೆ ಗ್ಯಾಸಿಗೆ ಇಷ್ಟು ರಣ ರಂಪ ಮಾಡ್ತಿದ್ದೀಯಾ? ಮುಂದೆ ಅಂತಹ ದಿನ ಬಂದರೆ ಹೇಗಮ್ಮ ಎಂದು ಪುಟ್ಟಿ ತನ್ನ ಕನಸನ್ನು ಹೇಳಿದಳು. ■